ಫರ್ಟಿಲೈಸರ್ ಫ್ಯಾಕ್ಟರಿಯನ್ನು ಪ್ರಾರಂಭಿಸಲು ರಾಘವ ಪಂತುಲು ಮಾತಿನ ಮೇರೆಗೆ ಅಪ್ಪ ಒಪ್ಪಿದ್ದಾರೆ. ಇಡೀ ಜಿಲ್ಲೆಯ ರೈತರನ್ನು ಮಲ್ಟಿನ್ಯಾಶನಲ್ ಕಂಪೆನಿಗಳ ಕಬಂಧಬಾಹುಗಳಿಂದ ಬಿಡಿಸಬೇಕೆಂಬ ಯೋಚನೆ ನನ್ನದು. ವಾರಣಾಸಿಯಲ್ಲಿ ಈಗ ನಾವು ಕಾಣಲು ಹೊರಟಿರುವ ಬಾಬಾ ಧಾತುಸೇನರಿಗೆ ಇಂಡಸ್ಟ್ರಿಯಲ್ ಮಿನಿಸ್ಟರ್ ತುಂಬಾ ಆಪ್ತರಂತೆ...' ಸುದೀರ್ಘವಾದ ಮಾತನ್ನು ನಿಲ್ಲಿಸಿ ನೀಲಾಂಜನ ಗಗನಸಖಿ ನೀಡಿದ ತಿಂಡಿ ಮತ್ತು ಪಾನೀಯಗಳನ್ನು ಸೇವಿಸತೊಡಗಿದಳು. ನನ್ನ ಪಾಲಿನದ್ದನ್ನು ನಾನೂ ಮುಗಿಸಿದ್ದೆ. ತೊಂಬತ್ತು ಪರ್ಸೆಂಟ್ ಪ್ರಯಾಣಿಕರು ನಿದ್ದೆಗೆ ಜಾರಿದ್ದರು ನೀಲಾಂಜನಾಳನ್ನೂ ಒಳಗೊಂಡು.

ನೀಲಾಂಜನ ನನ್ನ ಭುಜಕ್ಕೊರಗಿ ಕಣ್ಮುಚ್ಚಿದಾಗ ನನ್ನ ಕಣ್ಮುಂದೆ ರಾಘವ ಪಂತುಲುವಿನ ಚಿತ್ರ ಬಿಚ್ಚಿಕೊಂಡಿತ್ತು. ಅಂಥ ನಿರ್ಲಿಪ್ತ ಮತ್ತು ದಣಿವರಿಯದ ಮನುಷ್ಯನನ್ನು ಬೇರೆಲ್ಲೂ ನಾನು ಕಂಡಿರಲಿಲ್ಲ. ರಾಘವ ಪಂತುಲುಗೆ ಖಂಡಿತವಾಗಿಯೂ ಕ್ಯಾನ್ಸರ್ ಇರಲಾರದು. ನೀಲಾಂಜನ ತಮಾಷೆಗೆ ಹೇಳಿದ್ದಿರಬಹುದು ಅಥವಾ ಟ್ರೀಟ್‌ಮೆಂಟ್ ತೆಗೆದುಕೊಂಡು ಕ್ಯಾನ್ಸರ್‌ನಿಂದ ಮುಕ್ತನಾಗುತ್ತಿರಬಹುದು. ರಾಘವ ಪಂತುಲು ಯೂನಿವರ್ಸಿಟಿಯಲ್ಲಿ ನನ್ನ ಕ್ಲಾಸ್‌ಮೇಟ್ ಆಗಿದ್ದವನು ಮತ್ತು ನನಗಿಂತ ನಾಲ್ಕು ವರ್ಷ ಸೀನಿಯರ್ ಕೂಡ ಹೌದು. ನಾನು ಎಂ.ಎ. ಅರ್ಥಶಾಸ್ತ್ರಕ್ಕೆ ಸೇರಿದಾಗ ರಾಘವ ಪಂತುಲು ತತ್ವಶಾಸ್ತ್ರ ಮತ್ತು ಪೊಲಿಟಿಕಲ್ ಸೈನ್ಸ್‌ಗಳಲ್ಲಿ ಸ್ನಾತಕೋತ್ತರ ಪದವಿಗಳನ್ನು ಮುಗಿಸಿ ಎಂ.ಎ. ಅರ್ಥಶಾಸ್ತ್ರಕ್ಕೂ ಸೇರಿಕೊಂಡಿದ್ದ. ತಂದೆ ಆಂಧ್ರದಲ್ಲಿ ಪ್ರತಿಷ್ಠಿತ ವಿದ್ಯಾಸಂಸ್ಥೆಗಳನ್ನು ನಡೆಸುತ್ತಿದ್ದರಲ್ಲದೆ ಸಕ್ರಿಯ ರಾಜಕಾರಣದಲ್ಲೂ ದೊಡ್ಡ ಹೆಸರು ಮಾಡಿದ್ದರಂತೆ. ಆ ಕಾಲದಲ್ಲೇ ರಾಘವ ಪಂತುಲು ಹಾಸ್ಟೆಲ್ ಮತ್ತು ಕ್ಲಾಸುಗಳಿಗೆ ಓಡಾಡಲು ಫಿಯಟ್ ಕಾರ್ ಇಟ್ಟುಕೊಂಡಿದ್ದ. ಸ್ಟೂಡೆಂಟ್ ಯೂನಿಯನ್ ಚುನಾವಣೆಗೆ ನಿಂತುಕೊಳ್ಳುತ್ತಿದ್ದ ಅಭ್ಯರ್ಥಿಗಳಿಗೆ ದುಡ್ಡು ಕೊಡುತ್ತಿದ್ದ. ಬಡ ವಿದ್ಯಾರ್ಥಿಗಳಿಗೆ ಫೀಜು ಕಟ್ಟುತ್ತಿದ್ದನಲ್ಲದೆ ಬಟ್ಟೆ, ಪುಸ್ತಕಗಳನ್ನೂ ಕೊಡಿಸುತ್ತಿದ್ದ. ಊರಿನಿಂದ ಬಂದಾಗ ಲೆಕ್ಚರರ್ಸ್‌ಗೆ ಸ್ಕಾಚ್ ಬಾಟಲಿಗಳನ್ನು ತಂದುಕೊಡುತ್ತಿದ್ದನಂತೆ. ಹಾಗಾಗಿ ಆತನ ಹಿಂದೆ ಸದಾ ವಿದ್ಯಾರ್ಥಿಗಳ ಗುಂಪು ಇರುತ್ತಿತ್ತು. ನಾನು ಆತನಿಗೆ ರೂಮೇಟ್ ಆಗಿದ್ದೆ. ರೂಮಿನಲ್ಲಿ ಸ್ನೇಹಿತರೊಂದಿಗೆ ಡ್ರಿಂಕ್ಸ್ ಮಾಡುವುದು, ಸಿಗರೇಟು ಸೇದುವುದು, ಕಾರ್ಡ್ ಆಡುವುದು ಮಾಡುತ್ತಿದ್ದ. ಪ್ರತಿಬಾರಿಯೂ ನನ್ನನ್ನೂ ಆಹ್ವಾನಿಸಿ ಬಲವಂತಪಡಿಸುತ್ತಿದ್ದ. ಓದುವುದರಲ್ಲಿಯೂ ಇಡೀ ಕ್ಲಾಸಿಗೆ ಆತನೇ ಮುಂದಿದ್ದ!

ಮೂರು ತಿಂಗಳು ಕಳೆದಿತ್ತು. ರಾಘವ ಪಂತುಲುಗೆ ಹೇಳದೆಯೇ ನಾನು ರೂಮನ್ನು ಬದಲಾಯಿಸಿಕೊಂಡಿದ್ದೆ. ಅದಾದ ತಿಂಗಳಲ್ಲಿ ಇದ್ದಕ್ಕಿದ್ದಂತೆ ರಾಘವ ಪಂತುಲು ಯೂನಿವರ್ಸಿಟಿ ಖಾಲಿ ಮಾಡಿ ಊರಿಗೆ ಹೋಗಿಬಿಟ್ಟಿದ್ದ. ಅಂತಿಮ ವರ್ಷದಲ್ಲಿ ಫಸ್ಟ್‌ಕ್ಲಾಸ್‌ನಲ್ಲಿ ತೇರ್ಗಡೆಯಾಗಿ ಉಪನ್ಯಾಸಕ ಹುದ್ದೆಯನ್ನು ಆಯ್ಕೆ ಮಾಡಿಕೊಂಡಿದ್ದೆ. ಡಿಗ್ರಿ ತರಗತಿಗಳಿಗಾಗಿ ಅರ್ಥಶಾಸ್ತ್ರದಲ್ಲಿ ಅನೇಕ ಪುಸ್ತಕಗಳನ್ನು ಬರೆದಿದ್ದೆನಲ್ಲದೆ ಸರ್ಕಾರದ ಅನೇಕ ಸಮಿತಿಗಳಿಗೆ ಆಯ್ಕೆಯಾಗುತ್ತಿದ್ದೆ. ರಾಘವನನ್ನು ಬದುಕಿನ ಜಂಜಾಟಗಳಲ್ಲಿ ಮರೆತುಬಿಟ್ಟಿದ್ದೆ. ಆದರೆ ಆರು ತಿಂಗಳ ಹಿಂದೆ ರಾಘವ ಪಂತುಲು ನನ್ನನ್ನು ಹುಡುಕಿಕೊಂಡು ಬಂದು ಅಚ್ಚರಿ ಮೂಡಿಸಿದ್ದ. ಸರ್ಕಾರ ಸಾವಿರ ಮತ್ತು ಐನೂರು ರೂಪಾಯಿ ನೋಟುಗಳ ಅಪಮೌಲ್ಯೀಕರಣ ಮಾಡಿ ತಿಂಗಳಾಗಿತ್ತು. ಇಡೀ ಆರ್ಥಿಕ ವ್ಯವಸ್ಥೆಯಲ್ಲಿ ವಿಪರೀತವಾದ ಗೊಂದಲಮಯದ ವಾತಾವರಣ ನೆಲೆಗೊಂಡಿತ್ತು. ಅಪಮೌಲ್ಯೀಕರಣದ ಪರವಾಗಿ ನನ್ನ ಲೇಖನಗಳು ರಾಷ್ಟ್ರಮಟ್ಟದ